ಶ್ರೀ ವೀರ ಬುಕ್ಕಣ್ಣ ಒಡೆಯರು ಆಳುವಾಗ ನೀಡಿದ ದಾನದ ವಿವರಗಳಿವೆ. ಶಾಸನದ ಮೊದಲ ಅಕ್ಷರಗಳಾದ 'ಸ್ವಸ್ತಿಶ್ರೀ...'ಯಲ್ಲಿ 'ಶ್ರೀ' ಅಕ್ಷರವನ್ನು ಗುರುತಿಸುವಷ್ಟು ನಾನು ಈಗ ಪಳಗಿದ್ದೆ. ನಾಲ್ಕನೇ ಸಾಲು 'ಶ್ರೀವೀರಬು' ಎಂಬಲ್ಲಿ ಕೊನೆಯಾಗುತ್ತದೆ. ಶಾಸನದ ಮೇಲ್ಭಾಗದ ಎಡತುದಿ ಮುರಿದು ಹೋಗಿದೆ. ಈಗ ಮುಕ್ಕಾದುದಲ್ಲ, 1905ರಲ್ಲಿ ಎಪಿಗ್ರಾಫಿಯ ತಂಡ ನೋಡಿದಾಗಲೂ ಅದು ಮುಕ್ಕಾಗಿಯೇ ಇರಬೇಕು. ಮೊದಲ ಮೂರು ಸಾಲುಗಳ ಕೊನೆಯ ಭಾಗ ಇಲ್ಲದ ಕಾರಣ ಆ ಸಾಲುಗಳು ಎಪಿಗ್ರಾಫಿಯಾದಲ್ಲಿ ಅರ್ಧಕ್ಕೆ ನಿಂತಿವೆ. ಶಾಸನದ ಉಳಿದ ಮೇಲ್ಭಾಗದಲ್ಲಿ ಅರೆಚಂದ್ರ ಮತ್ತು ಆಂಜನೇಯ ಸ್ವಾಮಿಯ ಕೆತ್ತನೆ ಇದೆ. ಶಾಸನದ ಹಿಂಭಾಗವನ್ನು ಗಮನಿಸಿದೆ, ಅಚ್ಚರಿಯಾಯಿತು. ಸಾಧಾರಣವಾಗಿ ನೆಟ್ಟಗೆ ನಿಂತ ಚಪ್ಪಟೆ ಕಲ್ಲಿನ ಮೇಲಿರುವ ಶಾಸನದ ಹಿಂಭಾಗ ಖಾಲಿ ಇರುತ್ತದೆ. ಆದರೆ ಇಲ್ಲಿ, ಹಿಂಭಾಗದಲ್ಲಿಯೂ ಆಂಜನೇಯ ಸ್ವಾಮಿಯ ರೇಖಾ ಕೆತ್ತನೆ ಕಂಡಿತು. ಅಷ್ಟೇ ಅಲ್ಲ, ಈ ಶಾಸನದ ಮುಂಭಾಗದಲ್ಲಿ ಅರೆಹೂತು ಹೋಗಿರುವ ಒಂದು ವೀರಗಲ್ಲು ಇದೆ.

ಶಾಸನವನ್ನು ಕಂಡ ಖುಷಿಯಿಂದ ಈಗ ಐಜೂರು ಬೆಟ್ಟ ಏರಲು ಹೊರಟೆ. ಊರ ಹೊರಗೆ ಮಣ್ಣ ಹಾದಿಯಲ್ಲಿ ಎರಡು ಪುಟ್ಟ ಕಲ್ಲು ಗುಡ್ಡಗಳ ನಡುವೆ, ಬೆಟ್ಟದ ಬುಡದ ಸಮಾಧಿಕಲ್ಲುಗಳನ್ನು ಹಾದು ಬಂದಂತೆ – ಐಜೂರು ಬೆಟ್ಟ ಒಂದು ಬೆಟ್ಟವಲ್ಲ, ಒಂದೆಡೆಯೇ ನಿಂತ ಹಲವು ಬೆಟ್ಟಗಳ ಸಮೂಹ ಎಂದು ಅರಿವಾಯಿತು. ದೂರದಿಂದ ನೇರ ಕಂಡ ಐಜೂರು ಬೆಟ್ಟವನ್ನು ಹತ್ತತೊಡಗಿದೆ, ಕೆಲವು ಜಾರುವ ಭಾಗದಲ್ಲಿ ಎಚ್ಚರದಿಂದಿರಬೇಕು. ಇಲ್ಲಿ ಮಳೆನೀರು ನಿಂತು ಅನೇಕ ಪುಟ್ಟ ಕೆರೆಗಳು ಬೆಟ್ಟದ ಬುಡದಲ್ಲಿ ಇರುವಂತೆ, ಬೆಟ್ಟದ ಕಲ್ಲು ಕೊರಕಲಲ್ಲೂ ನೀರು ನಿಂತ ಕೊಳಗಳಿವೆ. ಸಣ್ಣ ಗುಹೆಗಳೂ ಕಂಡವು. ಶಿಖರದಲ್ಲಿ ನಿಂತಹಾಗೆ ಸುತ್ತಲಿನ ವಿಹಂಗಮ ನೋಟ ಸಮ್ಮೋಹನಗೊಳಿಸಿತ್ತು. ಹಿಂಬದಿಯಲ್ಲಿದ್ದ ದೊಡ್ಡ ರಾಯನ ಕೆರೆ, ಬಗಲಿನಲ್ಲಿಯೇ ಮತ್ತಷ್ಟು ಬೆಟ್ಟಗಳು, ದೂರದ ದಿಗಂತದ ಅಂಚಿನಲ್ಲಿ ನಾನಾಗಲೇ ಹತ್ತಿರುವ ಅನೇಕ ಬೆಟ್ಟಗಳು ಕಂಡವು. ಬಲದಿಕ್ಕಿಗೆ ಅತಿದೂರದಲ್ಲಿ ಶ್ವಾನಮುಖದಂತಿರುವ 'ಕೂನಗಲ್ಲು' ಬೆಟ್ಟವೂ ಕಂಡಿತು.

ಸುತ್ತಲಿನ ನಯನ ಮನೋಹರ ದೃಶ್ಯವನ್ನು ನೋಡಿ ಮೈಮರೆಯುತ್ತಿದ್ದಂತೆ, ನಾನು ಹಾದುಬಂದ ಮಣ್ಣ ಹಾದಿಯ ಬದಿಯ ಕಲ್ಲುಗುಡ್ಡ ಎದುರಿಗಿತ್ತು. ಗಮನಿಸಿದೆ, ಅಲ್ಲಿ ಬಂಡೆಗಳ ಮೇಲೆ ಒಂದು ಕಲ್ಲಿನ ಕಂಬ ವಾಲಿ ನಿಂತಿರುವುದು ಕಂಡಿತು. 'ಅಲ್ಲೇನಿದೆ?' ಕುತೂಹಲದಲ್ಲಿ ಇಳಿದು ಬರುವಾಗ ಆ ಜಾಗವನ್ನು ಶೋಧಿಸತೊಡಗಿದೆ. ಈ ಕಲ್ಲುಗುಡ್ಡ ಹರಡಿ ಮಲಗಿತ್ತು, ಅದರ ಸುತ್ತಲೂ ನನ್ನ ಎತ್ತರವನ್ನು ಮೀರಿಸಿ ಬೆಳೆದ ಪೊದೆಗಿಡಗಳು. ಅದರೀಚೆಗೆ ಇದ್ದ ಜಾಗದಲ್ಲಿ ಕೊಳಚೆಯ ರಾಶಿ. ನನ್ನ ಹುಡುಕಾಟಕ್ಕೆ ಹತ್ತಿರದೊಂದು ಬೀದಿಯಲ್ಲಿ ವಾಸಿಸುವ ಅಕ್ಷಯ್ ಮತ್ತು ಅವರ ಪತ್ನಿ ಮೇಘನಾ ಜೊತೆಯಾದರು. ಈಗ ಮೂರೂ ಜನ ಪೊದೆಗಿಡಗಳನ್ನು, ಮುಳ್ಳಿನ ಲಂಟಾನವನ್ನು ಸರಿಸುತ್ತಾ ಮುಂದೆ ನುಗ್ಗಿದೆವು, ನಾನು ಸಂತಸದಿಂದ 'ಯುರೇಕಾ' ಎಂದೆ. ಕಲ್ಲುಗುಡ್ಡದ ಬುಡದ ಬಂಡೆಯ ಕೊರಕಲಿನಲ್ಲಿ ಹರಡಿ ಬಿದ್ದಿದ್ದವು ಸುಂದರ ಕೆತ್ತನೆಯ ಒಂಬತ್ತು ವೀರಗಲ್ಲುಗಳು!

ಕೆಲವು ವೀರಗಲ್ಲುಗಳು ಭೂಮಿಯಿಂದ ಮೇಲೆ ಪೂರ್ತಿಯಾಗಿ ಎದ್ದು ನಿಂತಿದ್ದರೆ, ಹಲವು ಅರ್ಧ ಕುಸಿದು ಬಿದ್ದಿದ್ದವು, ಒಂದೆರಡು ಪೂರ್ತಿಯಾಗಿ ಹೂತೇ ಹೋಗಿ, ಮೇಲಿನ ಕೊಂಚ ಭಾಗವಷ್ಟೆ ಕಾಣುತ್ತಿತ್ತು. ಬುಡದಲ್ಲಿ ಬೆಳೆದ ಪೊದರುಗಳನ್ನು ಕೈಯಲ್ಲೇ ಕಿತ್ತು, ಕೆತ್ತನೆಗೆ ಅಂಟಿದ ಮಣ್ಣನ್ನು ಸ್ವಚ್ಛ ಮಾಡಿ ಸೂಕ್ಷ್ಮವಾಗಿ ಅವಲೋಕಿಸಿದಾಗ, ಅವು ಬೇರೆ ಬೇರೆ ಶತಮಾನಕ್ಕೆ ಸೇರಿದಂತೆ ಕಂಡವು. ವೀರಗಲ್ಲುಗಳ ಮೇಲಿನ ಕೆತ್ತನೆಯ ಶೈಲಿಯಲ್ಲಿ ಬಹಳಷ್ಟು ಭಿನ್ನತೆ ಇತ್ತು. ಊರು ಬೆಳೆದಂತೆ, ಕಟ್ಟಡಗಳು ಎದ್ದು ನಿಂತಂತೆ, ಹಲವು ಜಾಗದಲ್ಲಿದ್ದ ಈ ವೀರಗಲ್ಲುಗಳನ್ನು ಬಹುಶಃ, ಅವುಗಳ ಮೂಲಸ್ಥಾನದಿಂದ ಎತ್ತಿಸಿ ಇಲ್ಲಿಗೆ ತಂದು ಇಟ್ಟಿರಬೇಕು.

ಹಿಂತಿರುಗಿ ಬಂದ ಕೆಲವು ದಿನಗಳ ನಂತರ ನಾನು 1909–10ರ 'ಮೈಸೂರು ಆರ್ಕಿಯಾಲಜಿಕಲ್ ಸರ್ವೆ' ರಿಪೋರ್ಟ್ ಓದುತ್ತಿದ್ದೆ. ಅದರಲ್ಲಿ 'ಒಂದು ಬಲು ಮುಖ್ಯವಾದ ಗಂಗರ ಶಾಸನವನ್ನು ಐಜೂರಿನಲ್ಲಿ ಪತ್ತೆ ಹಚ್ಚಲಾಯಿತು' ಎಂದು ಬರೆದಿತ್ತು. 1930ರಲ್ಲಿ ಪ್ರಕಟವಾದ ಹಯವದನ ರಾವ್ ಅವರು ಸಂಪಾದಿಸಿದ 'ಮೈಸೂರು ಗ್ಯಾಜೆಟಿಯರ್'ನ ಎರಡನೇ ಹೊತ್ತಿಗೆಯಲ್ಲಿ ಈ ಶಾಸನ ದೊರೆ ನೀತಿಮಾರ್ಗ ಕ್ರಿ.ಶ. 869ರಲ್ಲಿ ಮರಣ ಹೊಂದಿದಾಗ ನಿಲ್ಲಿಸಿದ ವೀರಗಲ್ಲು ಎಂದು ತಿಳಿದುಬಂದಿತು. ಮೊದಲ



ಐಜೂರು ಬೆಟ್ಟದ ತಪ್ಪಲಿನಲ್ಲಿ ದಟ್ಟ ಪೊದೆಗಿಡಗಳ ಹಿಂದೆ ಕಂಡ ವೀರಗಲ್ಲುಗಳು

